## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 147 (278) |
| ಉತ್ತರಿಸುವ ದಿನಾಂಕ | : | 09.12.2025 |
| ಉತ್ತರಿಸುವ ಸಚಿವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ 3 ವರ್ಷಗಳಲ್ಲಿ ನಗರಾಭಿವೃದ್ಧಿ ಇಲಾಖೆಯು ಹಂಚಿಕೆ ಮಾಡಿದ ಸಿ.ಎ ನಿವೇಶನಗಳು ಮತ್ತು ಅವುಗಳಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಶಿವಮೊಗ್ಗ ಸೇರಿದಂತೆ ಎಲ್ಲಾ ಜಿಲ್ಲೆಗಳ ಜಿಲ್ಲಾವಾರು ಮಾಹಿತಿ ಒದಗಿಸುವುದು.</td><td rowspan="2">ಕಳೆದ 3 ವರ್ಷಗಳಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು / ನಗರ ಯೋಜನಾ ಪ್ರಾಧಿಕಾರಗಳು ಹಂಚಿಕೆ ಮಾಡಿದ ಸಿ.ಎ ನಿವೇಶನಗಳು ಮತ್ತು ಅವುಗಳಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಈ ಕೆಳಕಂಡಂತಿರುತ್ತದೆ.
<table>
<tr><th></th><th>ಸಿ.ಎ. ನಿವೇಶನಗಳಿಗೆ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ</th><th>ಸಿ.ಎ. ನಿವೇಶನ ಹಂಚಿಕೆಯಾಗಿರುವ ಸಂಖ್ಯೆ</th></tr>
<tr><td>ನಗರಾಭಿವೃದ್ಧಿ ಪ್ರಾಧಿಕಾರಗಳು</td><td>645</td><td>430</td></tr>
<tr><td>ನಗರ ಯೋಜನಾ ಪ್ರಾಧಿಕಾರಗಳು</td><td>129</td><td>21</td></tr>
</table>
ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ನಾಗರೀಕ ಸೌಲಭ್ಯ ನಿವೇಶನ ಕೋರಿ ಒಟ್ಟು 42 ಅರ್ಜಿಗಳು ಸ್ವೀಕೃತಗೊಂಡಿದ್ದು ಅದರಲ್ಲಿ 42 ನಾಗರೀಕ ಸೌಲಭ್ಯ ನಿವೇಶನಗಳು ಹಂಚಿಕೆಯಾಗಿರುತ್ತವೆ.<br><br>
ಮೇಲ್ಕಂಡ ನಿಯಮಗಳನ್ವಯ ಸಿ.ಎ ನಿವೇಶನಗಳನ್ನು ಹಂಚಿಕೆ ಮಾಡಲು ಆಯಾಯಾ ಪ್ರಾಧಿಕಾರಗಳಿಂದ ಕ್ರಮವಹಿಸಲಾಗುತ್ತಿದ್ದು, ಸಾರ್ವಜನಿಕರು ಸಿ.ಎ ನಿವೇಶನಗಳ ಹಂಚಿಕೆ ಪ್ರಕ್ರಿಯೆಯ ಬಗ್ಗೆ ಆಸ್ತಕಿ ತೋರುವಿಕೆಯಲ್ಲಿ ಕುಸಿತ ಕಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>
(ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1 ರಲ್ಲಿ ಒದಗಿಸಿದೆ)</td></tr>
<tr><td>ಆ)</td><td>ಸಾರ್ವಜನಿಕರು ಸಿ.ಎ ನಿವೇಶನಗಳ ಹಂಚಿಕೆ ಪ್ರಕ್ರಿಯೆಯ ಬಗ್ಗೆ ಆಸ್ತಕಿ ತೋರುವಿಕೆಯಲ್ಲಿ ಕುಸಿತ ಕಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದರೆ, ಕುಸಿತಕ್ಕೆ ಸರ್ಕಾರ ಗುರುತಿಸಿರುವ ಮುಖ್ಯ ಕಾರಣಗಳು ಯಾವುವು;</td></tr>
<tr><td>ಇ)</td><td>ಸಿ.ಎ ನಿವೇಶನಗಳ ಗುತ್ತಿಗೆ ಅವಧಿ ವಿಸ್ತರಣೆ ಸಂದರ್ಭದಲ್ಲಿ ಇಲಾಖೆ ಅನುಸರಿಸುತ್ತಿರುವ ಪ್ರಸ್ತುತ ನೀತಿ ಮಾರ್ಗ ಸೂಚಿಗಳು ಹಾಗೂ ಪರಿಷ್ಕರಣೆ</td><td>ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991 ರಲ್ಲಿ ನಾಗರೀಕ ಸೌಲಭ್ಯ ನಿವೇಶನಗಳ ಗುತ್ತಿಗೆ ಅವಧಿಯು 30 ವರ್ಷಗಳಾಗಿದ್ದು, ಈ ಅವಧಿ ಮುಗಿದ ನಂತರ ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಮುಂದಿನ 30 ವರ್ಷಗಳ ಅವಧಿಗೆ ಗುತ್ತಿಗೆಯನ್ನು ನವೀಕರಿಸಲು ನಿಯಮ 10(14)ರಲ್ಲಿ</td></tr>
</table>

| | | |
|---|---|---|
| | ಕ್ರಮಗಳು ಯಾವುವು; | ಅವಕಾಶ ಕಲ್ಪಿಸಲಾಗಿದೆ.<br><br>ಶಿಕ್ಷಣ ಸಂಸ್ಥೆಗಳು ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಿರುವ ಸಂಸ್ಥೆಗಳಿಗೆ ಗುತ್ತಿಗೆ ನವೀಕರಣ ಮಾಡುವಾಗ ಗುತ್ತಿಗೆ ಮೊತ್ತವನ್ನು ನಿಯಮ 13ರನ್ವಯ ಮರು ನಿಗಧಿಪಡಿಸಲಾಗಿದೆ.<br><br>ಗುತ್ತಿಗೆ ನವೀಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991 ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 2016ರಲ್ಲಿ ಗುತ್ತಿಗೆಯನ್ನು ನವೀಕರಿಸಲು ಅವಕಾಶವಿರುತ್ತದೆ. |
| ಈ) | ಕಳೆದ 5 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಸಿ.ಎ ನಿವೇಶನ ವಿಸ್ತರಣೆ ಅಥವಾ ಲೀಸ್ ನವೀಕರಣ ಕುರಿತಾಗಿ ಏನೇನು ವಿವಾದಗಳು, ಆಕ್ಷೇಪಣೆಗಳು ಅಥವಾ ತಕರಾರುಗಳು ದಾಖಲಾಗಿವೆ? (ವಿವರ ಒದಗಿಸುವುದು) | ಕಾರ್ಯದರ್ಶಿ, ಶ್ರೀ ಎಂ. ವಿಶ್ವೇಶ್ವರಯ್ಯ ಕೋ ಅಪರೇಟಿವ್ ಸೊಸೈಟಿ. ಲಿ., ಶಿವಮೊಗ್ಗ ಇವರಿಗೆ ಶಿವಮೊಗ್ಗ ತಾಲ್ಲೂಕು ನವುಲೆ ಗ್ರಾಮದ ಸ.ನಂ. 147 ರಿಂದ 152 ಇತರೆ ಖಾಸಗಿ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಅವಧಿಯನ್ನು ಮುಂದುವರೆಸುವ ಸಂಬಂಧ ಆಕ್ಷೇಪಣೆ ಸ್ವೀಕೃತವಾಗಿರುತ್ತದೆ.<br><br>ಸದರಿ ನಾಗರಿಕ ಸೌಲಭ್ಯ ನಿವೇಶನದ ಗುತ್ತಿಗೆ ಅವಧಿಯನ್ನು ನವೀಕರಿಸುವ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯ ಕೋರಲಾಗಿತ್ತು.<br><br>ಕಾನೂನು ಇಲಾಖೆಯು "ಪ್ರಶ್ನಿತ ನಾಗರಿಕ ಸೌಲಭ್ಯ ನಿವೇಶನ ನೋಂದಣಿಯಾಗಿ 21 ವರ್ಷಗಳ ನಂತರ ಕಟ್ಟಡ ಪರವಾನಿಗೆಯನ್ನು ಪಡೆದು ಕಟ್ಟಡವನ್ನು ನಿರ್ಮಿಸಲಾಗಿದ್ದು, ಕರಾರು ಪತ್ರದ ಒಪ್ಪಂದದಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿರುವುದು ಕಂಡು ಬರುತ್ತಿದ್ದು, ಗುತ್ತಿಗೆದಾರನು ನಿಯಮ 10(7) ಉಲ್ಲಂಘನೆ ಮಾಡಿರುವುದರಿಂದ ಪ್ರಸ್ತಾಪಿತ ಖಾಸಗಿ ಬಡಾವಣೆಯಲ್ಲಿನ ನಾಗರಿಕ ಸೌಲಭ್ಯ ನಿವೇಶನ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳವರೆಗೆ ವಿಸ್ತರಿಸುವ ಬಗ್ಗೆ ನಾಗರಿಕ ಸೌಲಭ್ಯಗಳುಳ್ಳ ನಿವೇಶನ ಹಂಚಿಕೆ ಸಮಿತಿಯ ಮುಂದೆ ಮಂಡಿಸಿ ಸೂಕ್ತ ನಿರ್ಣಯ ಕೈಗೊಳ್ಳುವಂತೆ ಅಭಿಪ್ರಾಯಿಸಿರುತ್ತದೆ.<br><br>ಕಾನೂನು ಇಲಾಖೆಯ ಅಭಿಪ್ರಾಯದಂತೆ ಸೂಕ್ತ ಕ್ರಮವಹಿಸುವಂತೆ ಸರ್ಕಾರದ ಪತ್ರ ಸಂಖ್ಯೆ: ನಅಇ 108 ಬೆಂರೂಪ್ರಾ 2023(ಇ), ದಿನಾಂಕ:10.09.2025ರಲ್ಲಿ ಆಯುಕ್ತರು, ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ ರವರಿಗೆ ನಿರ್ದೇಶನ ನೀಡಲಾಗಿದೆ **(ಅನುಬಂಧ-2).** |

**ಸಂಖ್ಯೆ: ನಅಇ 372 ಬೆಂರೂಪ್ರಾ 2025 (ಇ-ಕಡತ)**

**(ಬಿ.ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

## ಅನುಬಂಧ -1

| ಕ್ರ.ಸಂ | ನಗರಾಭಿವೃದ್ಧಿ ಪ್ರಾಧಿಕಾರದ ಹೆಸರು | ಕಳೆದ ಮೂರು ವರ್ಷಗಳಲ್ಲಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಕುರಿತು ಸ್ವೀಕರಿಸಿರುವ ಒಟ್ಟು ಅರ್ಜಿಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಲಭ್ಯವಿರುವ ಒಟ್ಟು ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆಯಾಗಿರುವ ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಬಾಕಿ ಉಳಿದಿರುವ ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ |
|---|---|---|---|---|---|
| 1 | ಬಾಗಲಕೋಟೆ | 3 | 41 | 0 | 41 |
| 2 | ಬೆಳಗಾವಿ | 27 | 112 | 2 | 11 |
| 3 | ಬಳ್ಳಾರಿ | 6 | 161 | 6 | 155 |
| 4 | ಬೀದರ್ | 8 | 50 | 7 | 43 |
| 5 | ವಿಜಯಪುರ | 76 | 291 | 76 | 215 |
| 6 | ಚಾಮರಾಜನಗರ-ರಾಮಸಮುದ್ರ | 7 | 38 | 5 | 15 |
| 7 | ಚಿಕ್ಕಮಗಳೂರು | 6 | 47 | 5 | 42 |
| 8 | ಚಿತ್ರದುರ್ಗ | 17 | 120 | 14 | 40 |
| 9 | ಚಿಕ್ಕಬಳ್ಳಾಪುರ | 9 | 110 | 7 | 103 |
| 10 | ದಾವಣಗೆರೆ-ಹರಿಹರ | 61 | 34 | 29 | 34 |
| 11 | ಗದಗ-ಬೆಟಗೇರಿ | 4 | 190 | 4 | 92 |
| 12 | ಕಲಬುರಗಿ | 38 | 331 | 38 | 293 |
| 13 | ಹಾಸನ | 34 | 96 | 32 | 64 |
| 14 | ಹಾವೇರಿ | 35 | 114 | 21 | 24 |
| 15 | ಹೊಸಪೇಟೆ | 18 | 54 | 11 | 43 |
| 16 | ಹುಬ್ಬಳ್ಳಿ-ಧಾರವಾಡ | 34 | 1019 | 30 | 614 |
| 17 | ಕಾರವಾರ | 5 | 6 | 1 | 5 |
| 18 | ಕೆ.ಜಿ.ಎಫ್. | 4 | 46 | 1 | 45 |
| 19 | ಕೋಲಾರ | 3 | 42 | 1 | 41 |
| 20 | ಕೊಪ್ಪಳ | 15 | 84 | 4 | 80 |
| 21 | ಮಡಿಕೇರಿ | 6 | 5 | 0 | 5 |
| 22 | ಮಂಡ್ಯ | 16 | 58 | 7 | 11 |
| 23 | ಮಂಗಳೂರು | 1 | 61 | 1 | 60 |
| 24 | ರಾಯಚೂರು | 12 | 182 | 8 | 174 |
| 25 | ಶಿವಮೊಗ್ಗ | 42 | 281 | 42 | 239 |
| 26 | ತುಮಕೂರು | 19 | 245 | 14 | 231 |
| 27 | ಉಡುಪಿ-ಮಲ್ಪೆ | 2 | 20 | 1 | 20 |
| 28 | ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ತೋರಣಗಲ್ಲು | 8 | 20 | 2 | 18 |
| 29 | ಯಾದಗಿರಿ | 11 | 77 | 11 | 66 |
| 30 | ಮೈಸೂರು | 43 | 541 | 43 | 498 |
| 31 | ಶಿರಾ | 0 | 21 | 0 | |
| 32 | ಸಿಂಧನೂರು | 58 | 55 | 0 | 0 |
| 33 | ರಾಣೇಬೆನ್ನೂರು | 17 | 92 | 7 | 85 |
| | **ಒಟ್ಟು** | **645** | **4644** | **430** | **3407** |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.

# ಅನುಬಂಧ -1

| ಕ್ರಮ ಸಂಖ್ಯೆ | ಯೋಜನಾ ಪ್ರಾಧಿಕಾರಗಳ ಹೆಸರು | ಕಳೆದ ಮೂರು ವರ್ಷಗಳಲ್ಲಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಕುರಿತು ಸ್ವೀಕರಿಸಿರುವ ಒಟ್ಟು ಅರ್ಜಿಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಲಭ್ಯವಿರುವ ಒಟ್ಟು ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆಯಾಗಿರುವ ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಬಾಕಿ ಉಳಿದಿರುವ ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ |
|---|---|---|---|---|---|
| 1 | ಅರಕಲಗೂಡು | 0 | 7 | 0 | 7 |
| 2 | ಅರಸೀಕೆರೆ | 1 | 39 | 0 | 39 |
| 3 | ಬಾದಾಮಿ | 7 | 39 | 7 | 39 |
| 4 | ಬಂಟ್ವಾಳ | 1 | 3 | 0 | 3 |
| 5 | ಬಸವಕಲ್ಯಾಣ | 1 | 24 | 0 | 24 |
| 6 | ಬೇಲೂರು-ಹಳೇಬೀಡು | 0 | 16 | 0 | 16 |
| 7 | ಚನ್ನರಾಯಪಟ್ಟಣ | 7 | 26 | 1 | 25 |
| 8 | ಚಿಂತಾಮಣಿ | 0 | 4 | 0 | 4 |
| 9 | ಚಿತ್ತಾಪೂರ | 0 | 7 | 0 | 7 |
| 10 | ಗಂಗಾವತಿ | 5 | 27 | 5 | 22 |
| 11 | ಗೋಕಾಕ | 0 | 19 | 0 | 19 |
| 12 | ಗೌರಿಬಿದನೂರು | 1 | 45 | 0 | 45 |
| 13 | [illegible] ನಿರ್ವಹಣಾ ಪ್ರಾಧಿಕಾರ | 3 | 21 | 1 | 18 |
| 14 | ಇಲಕಲ್ಲ | 2 | 17 | 0 | 17 |
| 15 | ಜಮಖಂಡಿ | 11 | 7 | 0 | 7 |
| 16 | ಕಾಪು | 0 | 0 | 0 | 0 |
| 17 | ಕೃಷ್ಣರಾಜನಗರ | 0 | 28 | 0 | 28 |
| 18 | ಕುಂದಾಪುರ | 0 | 3 | 0 | 3 |
| 19 | ಕುಶಾಲನಗರ | 4 | 20 | 1 | 19 |
| 20 | ಲಿಂಗಸುಗೂರು | 33 | 30 | 0 | 30 |
| 21 | ಕುಣಿಗಲ್ | 0 | 1 | 0 | 1 |
| 22 | ಮಾಲೂರು | 21 | 141 | 5 | 136 |
| 23 | ಮೂಡಬಿದ್ರೆ | 0 | 3 | 0 | 3 |
| 24 | ನಿಪ್ಪಾಣಿ | 0 | 5 | 0 | 5 |
| 25 | ಪುತ್ತೂರು | 0 | 14 | 0 | 14 |
| 26 | ರಾಮದುರ್ಗ | 0 | 20 | 0 | 20 |
| 27 | ರಬಕವಿ-ಬನಹಟ್ಟಿ | 0 | 23 | 0 | 23 |
| 28 | ಶಹಾಪೂರ | 5 | 29 | 0 | 29 |
| 29 | ಶೋರಾಪುರ | 0 | 7 | 0 | 7 |
| 30 | ಶಿರಸಿ | 0 | 2 | 0 | 2 |
| 31 | ವಾಡಿ-ಶಹಾಬಾದ | 0 | 7 | 0 | 7 |
| 32 | ಸೇಡಂ | 0 | 35 | 0 | 35 |
| 33 | ಶಿಡ್ಲಘಟ್ಟ | 0 | 13 | 0 | 13 |
| 34 | ತಿಪಟೂರು | 0 | 8 | 0 | 8 |
| 35 | ಹುಣಸೂರು | 10 | 19 | 1 ನಿವೇಶನ ಹಂಚಿಕೆ ಪ್ರಗತಿಯಲ್ಲಿದೆ | 18 |
| 36 | ಮುಧೋಳ | 10 | 12 | 0 | 12 |
| 37 | ಮಾನ್ವಿ | 7 | 11 | 1 | 10 |

| ಕ್ರಮ ಸಂಖ್ಯೆ | ಯೋಜನಾ ಪ್ರಾಧಿಕಾರಗಳ ಹೆಸರು | ಕಳೆದ ಮೂರು ವರ್ಷಗಳಲ್ಲಿ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ಕುರಿತು ಸ್ವೀಕರಿಸಿರುವ ಒಟ್ಟು ಅರ್ಜಿಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಲಭ್ಯವಿರುವ ಒಟ್ಟು ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಕಳೆದ ಮೂರು ವರ್ಷಗಳಲ್ಲಿ ಹಂಚಿಕೆಯಾಗಿರುವ ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ | ಪ್ರಾಧಿಕಾರದಲ್ಲಿ ಬಾಕಿ ಉಳಿದಿರುವ ನಾಗರೀಕ ಸೌಲಭ್ಯ ನಿವೇಶನಗಳ ಸಂಖ್ಯೆ |
|---|---|---|---|---|---|
| 38 | ಮಳವಳ್ಳಿ | 0 | 3 | 0 | 3 |
| 39 | ಚೆನ್ನೈ-ಬೆಂಗಳೂರು ಇಂಡಸ್ಟ್ರಿಯಲ್ ಕಾರಿಡಾರ್ ತುಮಕೂರು ಸ್ಥಳೀಯ ಯೋಜನಾ ಪ್ರಾಧಿಕಾರ ತುಮಕೂರು | 0 | 0 | 0 | 0 |
| 40 | ಸೋಮವಾರಪೇಟೆ | 0 | 0 | 0 | 0 |
| 41 | ಸಾಗರ | 0 | 2 | 0 | 2 |
| 42 | ಸಿಂಧಗಿ | 0 | 0 | 0 | 0 |
| 43 | ಸುಳ್ಯ | 0 | 0 | 0 | 0 |
| 44 | ವೇಮಗಲ್ ಕುರಗಲ್ | 0 | 0 | 0 | 0 |
| 45 | ಸಕಲೇಶಪುರ | 0 | 0 | 0 | 0 |
| 46 | ಇಂಡಿ | 0 | 0 | 0 | 0 |
| 47 | ಬಂಗಾರಪೇಟೆ | 0 | 0 | 0 | 0 |
| 48 | ಅಫಜಲಪೂರ-ದೇವಲ ಗಾಣಗಾಪೂರ | 0 | 0 | 0 | 0 |
| | ಒಟ್ಟು | 129 | 737 | 21 | 720 |

ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಆಯುಕ್ತಾಲಯ.

ಅನುಬಂಧ - 2

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 108 ಬೆಂರೂಪ್ರಾ 2023 (ಇ)

ಕರ್ನಾಟಕ ಸರ್ಕಾರದ, ಸಚಿವಾಲಯ
ಡಾ|| ಬಿ.ಆರ್. ಅಂಬೇಡ್ಕರ್ ವೀಧಿ.
ವಿಕಾಸಸೌಧ, 4ನೇ ಮಹಡಿ,
ಬೆಂಗಳೂರು, ದಿನಾಂಕ:10.09.2025.

**ಇವರಿಂದ,**
ಸರ್ಕಾರದ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ, ಬೆಂಗಳೂರು.

**ಇವರಿಗೆ,**
ಆಯುಕ್ತರು,
ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ,
ಶಿವಮೊಗ್ಗ.

**ಮಾನ್ಯರೆ,**

**ವಿಷಯ:** ಕಾರ್ಯದರ್ಶಿ ಶ್ರೀ ಎಂ ವಿಶ್ವೇಶ್ವರಯ್ಯ ಕೋ ಆಪರೇಟಿವ್ ಸೊಸೈಟಿ ಲಿ ಶಿವಮೊಗ್ಗ ಇವರಿಗೆ ಶಿವಮೊಗ್ಗ ತಾ ನವುಲೆ ಗ್ರಾಮದ ಸ ನಂ 147 ರಿಂದ 152 ಇತರೆ ಖಾಸಗಿ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಅವಧಿಯನ್ನು ಮುಂದುವರೆಸಿ ನವೀಕರಿಸಿಕೊಡುವಂತೆ ಕೋರಿರುವ ಬಗ್ಗೆ.

**ಉಲ್ಲೇಖ:**
1. ತಮ್ಮ ಪತ್ರ ಸಂಖ್ಯೆ: ಶಿಭನಪ್ರಾ/ಸಾಉನಿ/ಸಿ.ಆರ್-346/2023-24/425, ದಿನಾಂಕ:26.05.2023, 26.06.2024 ಮತ್ತು 13.11.2024.
2. ಕಾನೂನು ಇಲಾಖೆಯ ಅಭಿಪ್ರಾಯ: ಲಾ/ಅಭಿಪ್ರಾಯ/380/2025, ದಿನಾಂಕ:02.06.2025.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿದೆ. ಶ್ರೀ ಎಂ.ವಿಶ್ವೇಶ್ವರಯ್ಯ ಕೋ ಆಪರೇಟಿವ್ ಸೊಸೈಟಿ ಲಿ., ಶಿವಮೊಗ್ಗ ಇವರಿಗೆ ಶಿವಮೊಗ್ಗ ತಾ. ನವುಲೆ ಗ್ರಾಮದ ಸ.ನಂ. 147 ರಿಂದ 152 ಇತರೆ (ಯು.ಎ.ಎಸ್ & ಎ.ಡಿ.ಡಿ. ಎಂಪ್ಲಾಯಿಸ್ ಕೋ-ಅಪರೇಟಿವ್ ಸೊಸೈಟಿ, ಶಿವಮೊಗ್ಗ) ಖಾಸಗಿ ಬಡಾವಣೆಯಲ್ಲಿ ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಅವಧಿಯು ದಿನಾಂಕ:26.03.2023ಕ್ಕೆ ಮುಗಿದಿರುವುದರಿಂದ ಸದರಿ ಸಂಸ್ಥೆಯವರ ಕೋರಿಕೆಯಂತೆ 1991ರ ಸಾರ್ವಜನಿಕ ಉಪಯೋಗಿ ನಿವೇಶನ ಹಂಚಿಕೆ ನಿಯಮ 8(1) ಮತ್ತು 10(14) ಗಳಲ್ಲಿ ಅವಕಾಶವಿರುವಂತೆ ನಿವೇಶನದ ಗುತ್ತಿಗೆ ಮೊತ್ತವನ್ನು ಪರಿಷ್ಕರಿಸಿ ಮುಂದಿನ 30 ವರ್ಷಗಳ ಅವಧಿಗೆ ವಿಸ್ತರಿಸುವಂತೆ ಕೋರಿರುವ ಪ್ರಸ್ತಾವನೆಗೆ ಉಲ್ಲೇಖ (2)ರಲ್ಲಿ ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯಿಸಿರುತ್ತಾರೆ.

ಶಿವಮೊಗ್ಗ ತಾಲ್ಲೂಕು, ನವುಲೆ ಗ್ರಾಮದ ಸ.ನಂ.147 ರಿಂದ 152 ಇತರೆ (ಯು.ಎ.ಎಸ್ & ಎ.ಡಿ.ಡಿ ಎಂಪ್ಲಾಯಿಸ್ ಕೋ-ಆಪರೇಟಿವ್ ಸೊಸೈಟಿ ಶಿವಮೊಗ್ಗ) ಖಾಸಗಿ ಬಡಾವಣೆಯ ಸಿ.ಎ ನಿವೇಶನದ ಅಳತೆ 765.00 ಚ.ಮೀ ವಿಸ್ತೀರ್ಣವುಳ್ಳ ನಿವೇಶನವನ್ನು ಕಾರ್ಯದರ್ಶಿ, ಶ್ರೀ ಎಂ.ವಿಶ್ವೇಶ್ವರಯ್ಯ ಕೋ ಆಪರೇಟಿವ್ ಸೊಸೈಟಿ ಲಿ., ಶಿವಮೊಗ್ಗ ಇವರಿಗೆ ದಿನಾಂಕ:04.08.1992ರಂದು ಹಂಚಿಕೆಯಾಗಿರುತ್ತದೆ.

.....2

ನಿವೇಶನ ಪೂರ್ಣ ಗುತ್ತಿಗೆ ಮೌಲ್ಯ ರೂ. 1,33,875.00 ಪಾವತಿಸಿದ ಮೇರೆಗೆ ನಿಯಮ ಪ್ರಕಾರ ಸಂಸ್ಥೆಯವರ ಹೆಸರಿಗೆ ನಿವೇಶನವನ್ನು ದಿನಾಂಕ:27.03.1993ರಲ್ಲಿ ಗುತ್ತಿಗೆ ಒಪ್ಪಂದ ಪತ್ರದ ಮೂಲಕ ನೋಂದಾಯಿಸಿಕೊಡಲಾಗಿದೆ. ನಿವೇಶನ ಗುತ್ತಿಗೆ ಅವಧಿಯು ದಿನಾಂಕ:26.03.2023ಕ್ಕೆ ಮುಗಿಯುವುದರಿಂದ ಸದರಿ ಗುತ್ತಿಗೆ ಅವಧಿಯನ್ನು ನವೀಕರಿಸಿಕೊಡುವಂತೆ ಸಂಸ್ಥೆಯವರು ಕೋರಿರುವುದು ಕಂಡುಬರುತ್ತಿದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991ರ ನಿಯಮ 10(7) ರನ್ವಯ ಗುತ್ತಿಗೆದಾರನಿಗೆ ಗುತ್ತಿಗೆ ಕರಾರು ಪತ್ರವು ನೋಂದಣಿಯಾದ ಮೂರು ವರ್ಷಗಳ ಅವಧಿಯೊಳಗೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು ಅಥವಾ ಪ್ರಾಧಿಕಾರವು ಹತ್ತು ವರ್ಷಗಳನ್ನು ಮೀರದಂತಹ ಅವದಿಯವರೆಗೆ ಯಾವುದೇ ನಿರ್ದಿಷ್ಟ ಪ್ರಕರಣದಲ್ಲಿ ಲಿಖಿತ ಆದೇಶದ ಮೂಲಕ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲು ಅನುಮತಿ ನೀಡಬಹುದು ಎಂದು ಇರುತ್ತದೆ. ಸದರಿ ಅವಧಿಯೊಳಗೆ ಸಹ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸದಿದ್ದಲ್ಲಿ, ಸಂಸ್ಥೆಗೆ ಸಮರ್ಥನೀಯವಾದ ನೋಟೀಸ್‌ನ್ನು ಜಾರಿ ಮಾಡಿದ ಬಳಿಕ, ಹಂಚಿಕೆಯನ್ನು ರದ್ದುಪಡಿಸಬಹುದು ಮತ್ತು ಪ್ರಾಧಿಕಾರವು ಗುತ್ತಿಗೆದಾರರನ್ನು ನಿವೇಶನದಿಂದ ಒಕ್ಕಲೆಬ್ಬಿಸಬಹುದು ಎಂದು ತಿಳಿಸಲಾಗಿರುತ್ತದೆ.

ಪ್ರಸ್ತುತ ಪ್ರಕರಣದಲ್ಲಿ ಪ್ರಶ್ನಿತ ನಾಗರೀಕ ಸೌಲಭ್ಯದ ನಿವೇಶನದ ನೋಂದಣಿಯಾಗಿ 21 ವರ್ಷಗಳ ನಂತರ ಕಟ್ಟಡ ಪರವಾನಿಗೆಯನ್ನು ಪಡೆದು ಕಟ್ಟಡವನ್ನು ನಿರ್ಮಿಸಲಾಗಿದ್ದು ಕರಾರು ಪತ್ರದ ಒಪ್ಪಂದದಲ್ಲಿ ನಿಗದಿಪಡಿಸಿದ ಅವಧಿಯೊಳಗೆ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸಿರುವುದು ಕಂಡು ಬರುತ್ತಿದ್ದು, ನಿಯಮ 10(7)ರ ಸ್ಪಷ್ಟ ಉಲ್ಲಂಘನೆಯಾಗಿರುವುದು ಕಂಡುಬರುತ್ತಿದೆ

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ) ನಿಯಮಗಳು, 1991ರ ನಿಯಮ 10(14) ರಲ್ಲಿ ನಿಯಮಿಸಿರುವಂತೆ ನಿಯಮ 8ರ ಉಪ ನಿಯಮ (1) ~~ರನ್ವಯ ಸರ್ಕಾರ ಪೂರ್ವಾನುಮೋದನೆಯನ್ನು ಪಡೆದು ಗುತ್ತಿಗೆ ಅವಧಿಯನ್ನು ಮುಂದಿನ ಮೂವತ್ತು~~ ವರ್ಷಗಳ ಅವಧಿಯವರೆಗೆ ಗುತ್ತಿಗೆ ಮೊತ್ತವನ್ನು ಮರುನಿಗದಿಗೊಳಿಸಿ ಗುತ್ತಿಗೆದಾರನ ಪರವಾನಿಗೆಯನ್ನು ವಿಸ್ತರಿಸಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ **ಗುತ್ತಿಗೆದಾರನು ನಿಯಮದ ಸ್ಪಷ್ಟ ಉಲ್ಲಂಘನೆ ಮಾಡಿರುವುದರಿಂದ ಶ್ರೀ ಎಂ ವಿಶ್ವೇಶ್ವರಯ್ಯ ಕೋ ಆಪರೇಟಿವ್ ಸೊಸೈಟಿ ಲಿ. ಶಿವಮೊಗ್ಗ, ಇವರಿಗೆ ಶಿವಮೊಗ್ಗ, ತಾ ನವುಲೆ ಗ್ರಾಮದ ಸನಂ 147 ರಿಂದ 152 ಇತರೆ (ಯು.ಎಎಸ್ & ಎ.ಡಿ.ಡಿ. ಎಂಪ್ಲಾಯಿಸ್ ಕೋ-ಅಪರೇಟಿವ್ ಸೊಸೈಟಿ, ಶಿವಮೊಗ್ಗ) ಖಾಸಗಿ ಬಡಾವಣೆಯಲ್ಲಿ ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳವರೆಗೆ ವಿಸ್ತರಿಸುವ ಬಗ್ಗೆ, ನಾಗರಿಕ ಸೌಲಭ್ಯಗಳುಳ್ಳ ನಿವೇಶನ ಹಂಚಿಕೆ ಸಮಿತಿಯ ಮುಂದೆ ಮಂಡಿಸಿ ಈ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಬಹುದಾಗಿರುತ್ತದೆ ಎಂದು ಅಭಿಪ್ರಾಯಿಸಿರುತ್ತಾರೆ.**

ಕಾನೂನು ಇಲಾಖೆಯ ಅಭಿಪ್ರಾಯದಂತೆ, ಹಾಗೂ ಚಾಲ್ತಿಯಲ್ಲಿರುವ ನಿಯಮಾವಳಿಗಳು, ಕಾಯ್ದೆ, ಸುತ್ತೋಲೆಗಳನ್ವಯ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಮ್ಮನ್ನು ಕೋರಲು ನಿರ್ದೇಶಿಸಲ್ಪಟ್ಟಿದ್ದೇನೆ.

(ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಅನುಮೋದಿತ)

ತಮ್ಮ ನಂಬುಗೆಯ,

(ಲತಾ.ಕೆ) 12/09/23

ಸರ್ಕಾರದ ಅಧೀನ ಕಾರ್ಯದರ್ಶಿ,

(ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ನಯೋಪ್ರ)

ನಗರಾಭಿವೃದ್ಧಿ ಇಲಾಖೆ

ಅನುಬಂಧ-2

# ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ

ವಿನೋಬನಗರ, 100 ಅಡಿ ರಸ್ತೆ, ಶಿವಮೊಗ್ಗ-577204

ದೂರವಾಣಿ ಸಂಖ್ಯೆ:08182-249867 e-mail : sudashivamogga@gmail.com

ನಂ. ಶಿಭನಪ್ರಾ/ನಾ.ಸೌ./ಚು.ಗು.ಪ್ರಶ್ನೆ /147(278)/2025-26 ದಿನಾಂಕ:29-11-2025

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸಸೌಧ, 4ನೇ ಮಹಡಿ,
ಡಾ// ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು-ಇವರಿಗೆ.

ಮಾನ್ಯರೇ,

ವಿಷಯ:- ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತು ಪ್ರಶ್ನೆ ಸಂಖ್ಯೆ 147 (278) ಕ್ಕೆ ಸಂಬಂಧಿಸಿದಂತೆ ಉತ್ತರ ನೀಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಪತ್ರ ನಂ ಕವಿಪ/157ನೇ/ಅ/2025 ದಿ:24-11-2025

********

| | ಪ್ರಶ್ನೆ | ಉತ್ತರ |
|---|---|---|
| | 1 | 2 |
| (ಅ) | ಕಳೆದ 3 ವರ್ಷಗಳಲ್ಲಿ ನಗರಾಭಿವೃದ್ಧಿ ಇಲಾಖೆಯು ಹಂಚಿಕೆ ಮಾಡಿದ ಸಿ.ಎ ನಿವೇಶನಗಳು ಮತ್ತು ಅವುಗಳಿಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಶಿವಮೊಗ್ಗ ಸೇರಿದಂತೆ ಎಲ್ಲಾ ಜಿಲ್ಲೆಗಳ ಜಿಲ್ಲಾವಾರು ಮಾಹಿತಿ ಒದಗಿಸುವುದು: | ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದಂತೆ ಕಳೆದ 3 ವರ್ಷಗಳಲ್ಲಿ ಸರ್ಕಾರಿ / ಸಂಘ ಸಂಸ್ಥೆಗಳಿಗೆ 42 ನಾಗರೀಕ ಸೌಲಭ್ಯ ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ವರ್ಷವಾರು ವಿವರ ಕೆಳಕಂಡಂತ್ತಿದೆ. |

| ಕ್ರ. ಸಂ | ವರ್ಷ | ಸ್ವೀಕೃತವಾಗಿರುವ ಅರ್ಜಿಗಳು | ಹಂಚಿಕೆ ಮಾಡಿರುವ ಸಂಖ್ಯೆ |
|---|---|---|---|
| 1 | 2022-23 | 13 | 13 |
| 2 | 2023-24 | 22 | 22 |
| 3 | 2024-25 | 07 | 07 |
| 4 | 2025-26 | 13 | 13 |
| | ಒಟ್ಟು | 55 | 55 |

| | ಪ್ರಶ್ನೆ | ಉತ್ತರ |
|---|---|---|
| (ಆ) | ಸಾರ್ವಜನಿಕರು ಸಿ.ಎ ನಿವೇಶನಗಳ ಹಂಚಿಕೆ ಪ್ರಕ್ರಿಯೆಯ ಬಗ್ಗೆ ಆಸಕ್ತಿ ತೋರುವಿಕೆಯಲ್ಲಿ ಕುಸಿತ ಕಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದರೆ, ಕುಸಿತಕ್ಕೆ ಸರ್ಕಾರ ಗುರುತಿಸಿರುವ ಮುಖ್ಯ ಕಾರಣಗಳು ಯಾವುವು; | ಸರ್ಕಾರದ ಹಂತದಲ್ಲಿ ಕ್ರಮವಹಿಸಬೇಕಾಗಿದೆ |
| (ಇ) | ಸಿ.ಎ ನಿವೇಶನಗಳ ಗುತ್ತಿಗೆ ಅವಧಿ ವಿಸ್ತರಣೆ ಸಂದರ್ಭದಲ್ಲಿ ಇಲಾಖೆ ಅನುಸರಿಸುತ್ತಿರುವ ಪ್ರಸ್ತುತ ನೀತಿ ಮಾರ್ಗ ಸೂಚಿಗಳು ಹಾಗೂ ಪರಿಷ್ಕರಣೆ ಕ್ರಮಗಳು ಯಾವುವು; | 1991 ರ ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ ನಿಯಮ (8) ಉಪ ನಿಯಮ (1) ರಂತೆ ನಾಗರೀಕ ಸೌಲಭ್ಯ ನಿವೇಶನ ನವೀಕರಿಸಬೇಕಾದಲ್ಲಿ ಮೊದಲಬಾರಿಗೆ ನಿವೇಶನವನ್ನು ಗುತ್ತಿಗೆ ಆಧಾರದ ಮೇಲೆ ಹಂಚಿಕೆ ಮಾಡುವ ಸಂದರ್ಭದಲ್ಲಿ ನಿಗಧಿಪಡಿಸಲಾಗಿದ್ದ ದರಕ್ಕಿಂತ ಶೇ.50 ರಷ್ಟು ಹೆಚ್ಚು ದರವನ್ನು ಮುಂದಿನ ಅವಧಿಗೆ ನಿಯಮ (10)ರ ಉಪ |

| | | |
|---|---|---|
| | | ನಿಯಮ (14) ರನ್ವಯ ನಿಯಮ 8(1) ರಲ್ಲಿ ನಿಗಧಿಸಿದಂತೆ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳ ಅವಧಿಯ [illegible]ಗೆ ನಿಗಧಿಪಡಿಸತಕ್ಕದ್ದು ಎಂಬುದಾಗಿ ತಿಳಿಸಲಾಗಿದೆ. |
| (ಈ) | ಕಳೆದ 5 ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಸಿ.ಎ ನಿವೇಶನ ವಿಸ್ತರಣೆ ಅಥವಾ ಲೀಸ್ ನವೀಕರಣ ಕುರಿತಾಗಿ ಏನೇನು ವಿವಾದಗಳು, ಆಕ್ಷೇಪಣೆಗಳು ಅಥವಾ ತಕರಾರುಗಳು ದಾಖಲಾಗಿವೆ? (ವಿವರ ಒದಗಿಸುವುದು) | ಕಾರ್ಯದರ್ಶಿ, ಶ್ರೀ ಎಂ.ವಿಶ್ವೇಶ್ವರಯ್ಯ ಕೋ ಆಪರೇಟಿವ್ ಸೊಸೈಟಿ ಲಿ., ಶಿವಮೊಗ್ಗ ಇವರಿಗೆ ಶಿವಮೊಗ್ಗ ತಾ. ನವುಲೆ ಗ್ರಾಮದ ಸ.ನಂ. 147 ರಿಂದ 152 ಇತರೆ ಖಾಸಗಿ ಬಡಾವಣೆಯಲ್ಲಿ ಹಂಚಿಕೆ ಮಾಡಿರುವ ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಅವಧಿಯನ್ನು ಮುಂದುವರೆಸುವ ಸಂಬಂಧ ಆಕ್ಷೇಪಣೆ ಸ್ವೀಕೃತವಾಗಿರುತ್ತದೆ.<br>ಸರ್ಕಾರದ ಪತ್ರ ನಂ. ನಅಇ/108/ಬೆಂರೂಪ್ರಾ/2023 (ಇ) ದಿನಾಂಕ:10-09-2025 ರಲ್ಲಿ ಸಂಸ್ಥೆಯವರಿಗೆ ಹಂಚಿಕೆ ಮಾಡಿರುವ ನಾಗರೀಕ ಸೌಲಭ್ಯ ನಿವೇಶನದ ಗುತ್ತಿಗೆ ಅವಧಿಯನ್ನು ಮುಂದಿನ 30 ವರ್ಷಗಳವರೆಗೆ ವಿಸ್ತರಿಸುವ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯದಂತೆ ಹಾಗೂ ಚಾಲ್ತಿಯಲ್ಲಿರುವ ನಿಯಮಾವಳಿಗಳು, ಕಾಯ್ದೆ, ಸುತ್ತೋಲೆಗಳನ್ವಯ ಪರಿಶೀಲಿಸಿ ಅಗತ್ಯ ಕ್ರಮಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಅದರಂತೆ ವಿಷಯವನ್ನು ಪ್ರಾಧಿಕಾರದ ಉಪ ಸಮಿತಿ ಸಭೆಗೆ ವಿಷಯ ಮಂಡಿಸಲಾಗಿರುತ್ತದೆ. |

ತಮ್ಮ ವಿಶ್ವಾಸಿ,

ಆಯುಕ್ತರು,
ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ಧಿ ಪ್ರಾಧಿಕಾರ,
ಶಿವಮೊಗ್ಗ